# ಪ್ರಾರ್ಥನೆ

## ಮೂರ್ತಮಹೇಶ್ವರಸ್ತೋತ್ರಮ್

ಮೂರ್ತಮಹೇಶ್ವರಮುಜ್ವಲಭಾಸ್ಕರ–
ಮಿಷ್ಟಮಮರನರವಂದ್ಯಮ್ ।
ವಂದೇ ವೇದತನುಮುಜ್ಝಿತಗರ್ಹಿತ–
ಕಾಂಚನಕಾಮಿನಿಬಂಧಮ್ ॥

ಸೂರ್ಯನಂತೆ ಪ್ರಜ್ವಲಿಸುತ್ತಿರುವ, ದೇವತೆಗಳಿಂದಲೂ ಮನುಷ್ಯರಿಂದಲೂ ವಂದ್ಯನಾದ, ಕಾಮಕಾಂಚನಗಳ ಕುತ್ಸಿತವಾದ ಬಂಧನವನ್ನು ತೊರೆದಿರುವ, ವೇದಮಯನಾಗಿದ್ದುಕೊಂಡು ಮನುಷ್ಯರೂಪದಲ್ಲಿ ಅವತೀರ್ಣನಾದ ನನ್ನ ಇಷ್ಟದೇವತೆಯಾದ ಮಹಾದೇವನನ್ನು ನಾನು ವಂದಿಸುತ್ತೇನೆ.

ಕೋಟಿಭಾನುಕರದೀಪ್ತಸಿಂಹಮಹೋ
ಕಟಿತಟಕೌಪೀನವಂತಮ್ ।
ಅಭೀರಭೀಃ ಹುಂಕಾರನಾದಿತದಿಙ್ಮುಖ–
ಪ್ರಚಂಡತಾಂಡವನೃತ್ಯಮ್ ॥

ಕೋಟಿಸೂರ್ಯಕಿರಣಗಳಿಂದ ಪ್ರಜ್ವಲಿಸುತ್ತಿರುವ, ಪುರುಷಸಿಂಹನಾದ, ಕೌಪೀನಧಾರಿಯಾದ, 'ಅಭೀಃ, ಅಭೀಃ' (ನಿರ್ಭಯತೆ, ನಿರ್ಭಯತೆ) ಎಂಬ ಹುಂಕಾರದಿಂದ ನಾಲ್ಕು ದಿಕ್ಕುಗಳಲ್ಲಿಯೂ ಪ್ರತಿಧ್ವನಿಯನ್ನು ಉಂಟುಮಾಡಿ, ಪ್ರಚಂಡ ತಾಂಡವವನ್ನು ಆಡುತ್ತಿರುವ (ಗುರು ವಿವೇಕಾನಂದನನ್ನು ನಾನು ಸ್ಮರಿಸುತ್ತೇನೆ).

ಭಕ್ತಿಮುಕ್ತಿಕೃಪಾಕಟಾಕ್ಷಪ್ರೇಕ್ಷಣ–
ಮಘದಲವಿದಲನದಕ್ಷಮ್ ।
ಬಾಲಚಂದ್ರಧರಮಿಂದುವಂದ್ಯಮಿಹ
ನೌಮಿ ಗುರು ವಿವೇಕಾನಂದಮ್ ॥

ಭಕ್ತಿ–ಮುಕ್ತಿಗಳನ್ನು ತನ್ನ ಕೃಪಾಕಟಾಕ್ಷದಿಂದಲೇ ಅನುಗ್ರಹಿಸುವ, ಪಾಪರಾಶಿಯನ್ನು ನಾಶಮಾಡುವ ಸಾಮರ್ಥ್ಯವುಳ್ಳ, ಶಶಿಶೇಖರನಾದ (ಸಾಕ್ಷಾತ್ ಶಿವನೇ ಆದ), ಇಂದುವಿನಿಂದ (ಕವಿಯ ಕವಿನಾಮ) ವಂದಿತನಾದ ಗುರು ವಿವೇಕಾನಂದನನ್ನು ನಾನು ನಮಸ್ಕರಿಸುತ್ತೇನೆ.

–ಶರತ್ ಚಂದ್ರ ಚಕ್ರವರ್ತಿ
(ಸ್ವಾಮಿ ವಿವೇಕಾನಂದರ ಶಿಷ್ಯ)

# ಸೂಕ್ತಿಪ್ರಭ

## ವಿವೇಕವಾಣಿ

**ಆ**ತ್ಮಶ್ರದ್ಧೆ ನಮಗೆ ಮಹೋಪಕಾರಿ. ಆತ್ಮಶ್ರದ್ಧೆಯ ತತ್ತ್ವವನ್ನು ಜನರಿಗೆಲ್ಲ ಬೋಧಿಸಿದ್ದರೆ, ಅದನ್ನು ಅವರು ಅನುಷ್ಠಾನದಲ್ಲಿ ತಂದಿದ್ದರೆ, ನಮ್ಮಲ್ಲಿರುವ ಬಹುಪಾಲು ಶೋಕತಾಪಗಳು ಮಾಯವಾಗುತ್ತಿದ್ದವು ಎನ್ನುವುದರಲ್ಲಿ ಸಂದೇಹವಿಲ್ಲ. ಮಹಾಮಹಿಮರಾದ ಸ್ತ್ರೀಪುರುಷರ ಶೀಲಗಳಲ್ಲಿ ಹಾಗೂ ಅವರ ಕ್ರಿಯೋತ್ತೇಜಕ ಶಕ್ತಿಗಳಲ್ಲಿ ಅತಿಶ್ರೇಷ್ಠವಾದುದೇ ಅವರಲ್ಲಿದ್ದ ಅತ್ಮಶ್ರದ್ಧೆ ಎಂದು ನಮ್ಮ ಅರಿವಿಗೆ ಬರುತ್ತದೆ. ತಾವು ಮಹಾಪುರುಷರಾಗುವುದಕ್ಕೆ ಜನ್ಮವೆತ್ತಿರುವುದು ಎಂದು ಅವರು ನಂಬಿದ್ದರಿಂದಲೇ ಅವರು ಮಹಾಪುರುಷರಾದರು.

**ಮ**ನುಷ್ಯ ನರಕದ ಪಾತಾಳಕ್ಕೆ ಹೋಗಬಹುದು. ಹೀಗಾದರೂ ಒಂದು ಸಮಯ ಬರುವುದು, ಆಗ ಅವನು ಇನ್ನೂ ಕೆಳಕ್ಕೆ ಹೋಗಲು ಸಾಧ್ಯವಾಗುವುದಿಲ್ಲ. ಅಗ ವಿಧಿಯಿಲ್ಲದೆ ಅವನು ಮೇಲೇಳಬೇಕಾಗುವುದು. ಆಗಲಾದರೂ ಅವನು ಆತ್ಮಶ್ರದ್ಧೆಯನ್ನು ಬೆಳೆಸಿಕೊಳ್ಳುವನು. ಹೀಗಾಗಿ, ಇದನ್ನು ಈಗಲೇ ಬೆಳೆಸಿಕೊಳ್ಳುವುದು ಒಳ್ಳೆಯದು. ಆತ್ಮಶ್ರದ್ಧೆಯನ್ನು ಬೆಳೆಸಿಕೊಳ್ಳಲು ಇಷ್ಟೊಂದು ಕಷ್ಟವನ್ನು ನಾವು ಏತಕ್ಕೆ ತಾನೇ ಅನುಭವಿಸಬೇಕು?

**ನಾ**ವು ಈ ಕೆಲಸವನ್ನು ಮಾತ್ರ ಮಾಡಬಲ್ಲೆವು; ಅದನ್ನು ಮಾಡಲಾರೆವು ಎಂಬುದೆಲ್ಲ ಬರಿಯ ಮೂಢನಂಬಿಕೆ. ನಾವು ಏನು ಬೇಕಾದರೂ ಮಾಡಬಲ್ಲೆವು; ಮೊದಲು ನಿಮ್ಮಲ್ಲಿ ಶ್ರದ್ಧೆ ಇರಲಿ ಎನ್ನುತ್ತದೆ ವೇದಾಂತ. ಕೆಲವು ಧರ್ಮಗಳು ನಮಗಿಂತ ಹೊರಗೆ ಇರುವ ಸಾಕಾರ ದೇವರಲ್ಲಿ ನಂಬದವರು ನಾಸ್ತಿಕರು ಎನ್ನುವಂತೆ, ವೇದಾಂತ ಯಾರಿಗೆ ಆತ್ಮಶ್ರದ್ಧೆ ಇಲ್ಲವೋ ಅವರನ್ನು ನಾಸ್ತಿಕರೆಂದು ಸಾರುವುದು. ಅತ್ಮನ ಮಹಿಮೆಯಲ್ಲಿ ಶ್ರದ್ಧೆ ಇಡದೆ ಇರುವುದನ್ನೇ ವೇದಾಂತವು ನಾಸ್ತಿಕತೆ ಎನ್ನುತ್ತದೆ.

**ಮ**ಹಾಶ್ರದ್ಧೆ ಮಾತ್ರವೇ ನಮ್ಮನ್ನು ಉತ್ತಮಸ್ಥಿತಿಗೆ ತೆಗೆದುಕೊಂಡು ಹೋಗಬಲ್ಲದು. ಇದರಲ್ಲಿ ನನಗೆ ಸಂದೇಹವೇ ಇಲ್ಲ. ನನ್ನ ವಿಷಯವಾಗಿ ನನಗೆ ಎಲ್ಲಾ ಗೊತ್ತಿದೆ ಎಂದು ಯಾರು ನಿಜವಾಗಿ ಹೇಳಬಲ್ಲನೋ, ಅವನೇ ಶ್ರೇಷ್ಠ ಮಾನವ. ನಿಮ್ಮಲ್ಲಿ ಎಂತಹ ಶಕ್ತಿ, ಸಾಧ್ಯತೆ, ಮಹಿಮೆಗಳು ಇವೆ ಎಂಬುದು ನಿಮಗೆ ಗೊತ್ತೆ? ಮನುಷ್ಯನಲ್ಲಿರುವುದೆಲ್ಲ ಯಾವ ವಿಜ್ಞಾನಿಗೆ ಗೊತ್ತಿದೆ? ಮಾನವನು ಪ್ರಪಂಚಕ್ಕೆ ಬಂದು ಕೋಟ್ಯಂತರ ವರುಷಗಳಾದವು. ಆದರೂ ಅವನ ಮಹಾಮಹಿಮೆಯಲ್ಲಿ ಕಿಂಚಿತ್ ಮಾತ್ರ ಪ್ರಕಾಶಿತವಾಗಿದೆ. ಆದಕಾರಣವೇ ನೀವು ದುರ್ಬಲರು ಎಂದು ಹೇಳಿಕೊಳ್ಳಕೂಡದು. ನಿಮ್ಮ ಅವನತಿಯೆಂಬುದು ಬರಿಯ ತೋರಿಕೆ. ಅದರ ಹಿಂದೆ ಎಂತಹ ಸಾಧ್ಯತೆಗಳು ಹುದುಗಿರುವುವೋ ಯಾರಿಗೆ ಗೊತ್ತು? ನಿಮ್ಮಲ್ಲಿ ಏನಿರುವುದೋ ಅದರ ಕಿಂಚಿತ್ ಮಾತ್ರವೇ ನಿಮಗೆ ಗೊತ್ತಿದೆ. ನಿಮ್ಮ ಹಿಂದೆ ಅನಂತಶಕ್ತಿಯ ಸಾಗರವಿದೆ, ಧನ್ಯತೆ ಇದೆ.